

# ಚೆನ್ನೈ ಡೈರಿ

## ಕನ್ನಡಿ ಒಳಗಿನ ಗಂಟು ಮತ್ತು ವಾಲ್ನಟ್ ಮೊಟ್ಟೆ

ವಿಮಾನ ರನ್ ವೇಯಲ್ಲಿ ನಿಂತಿತು. ಹೊರಗಿನ ತಾಪಮಾನದ ಮುನ್ಸೂಚನೆಯೋ ಎಂಬಂತೆ ಸೀಟಿನಲ್ಲಿ ಕುಳಿತಿದ್ದ ನನಗೆ ಬೆವರು ಮೂಡತೊಡಗಿತು. ಮೇಲೆ ಹಾಕಿದ್ದ ಪುಲ್ ಓವರ್ ತೆಗೆದು ಕೈಯಲ್ಲಿ ಹಿಡಿದು ಮತ್ತೊಂದು ಕೈಯಲ್ಲಿ ಕ್ಯಾಬಿನ್ ಬ್ಯಾಗ್ ಹೊತ್ತು ಎಕ್ಸಿಟ್‌ನತ್ತ ಹೊರಟೆ. 'ಎಂಗ ಪೋಣುಂ ಸರ್?' (ಎಲ್ಲಿಗೆ ಹೋಗ್ಬೇಕು?) ಎಂದು ನಾನು ತಮಿಳು ಸಿನೆಮಾಗಳಲ್ಲಿ ನೋಡಿದ್ದ ಪಾತ್ರಗಳನ್ನೇ ಹೋಲುವ ಅನೇಕ ಡ್ರೈವರುಗಳ ನನ್ನೆಡೆಗೆ ನುಗ್ಗಿದರು.

ಭಾಷೆ ಬಾರದ ಊರಿನಲ್ಲಿ ವ್ಯವಹರಿಸುವುದೆಂದರೆ ಮುಜುಗರ. ವ್ಯವಹರಿಸುವಷ್ಟು ಹಿಂದಿ ತಿಳಿದಿರುವುದರಿಂದ ಬೇರೆಲ್ಲಿಯೂ ಅಷ್ಟಾಗಿ ಸಮಸ್ಯೆ ಆಗದು. ತಮಿಳುನಾಡಿನಲ್ಲಿ ಮಾತ್ರ ನಿಸ್ಸಹಾಯಕ ಪರಿಸ್ಥಿತಿಗೆ ಬಂದು ನಿಲ್ಲುತ್ತದೆ ನಾಲಿಗೆ. ಏನೇ ಕೇಳ ಹೇಳಬೇಕೆಂದರೂ ಅದು ಸಲೀಸಾಗಿ ಹೊರಳದು. ಹೇಳಬೇಕೆಂಬುದನ್ನು ತಲೆಯಲ್ಲೇ ಹಲವು ಬಾರಿ ಪಠಿಸಿ ಆಮೇಲೆ ಅದನ್ನ ಡೆಲಿವರಿ ಮಾಡುವ ಗೋಜು. ನೇರವಾಗಿ ಓಲಾ ಕೌಂಟರಿಗೆ ಹೋಗಿ ನನ್ನ ಬುಕಿಂಗ್ ತೋರಿಸಿ ಕ್ಯಾಬಿಗಾಗಿ ನಿರೀಕ್ಷಿಸುವ ಸ್ಥಳ ಖಚಿತಪಡಿಸಿಕೊಂಡು, ತಮಿಳಿನಲ್ಲೇ ವ್ಯವಹರಿಸಿ ಖುಷಿಯಿಂದ ಹೋಟೆಲಿಗೆ ಹೊರಟೆ.

'ನನ್ನ ರೂಮ್ ಬುಕಿಂಗ್ 11 ಗಂಟೆಯಿಂದ ಇದೆ. ಆದರೆ ನಾನು ಬುಕಿಂಗ್ ಮಾಡುವಾಗಲೇ